# ಹಿಂಸೆಯಿಂದ ಆತ್ಮಗೌರವದ ಕಡೆಗೆ ಮುನ್ನಡೆಸುವ ಲೇಖಕಿ: ಹಾನ್ ಕಾಂಗ್

ದಕ್ಷಿಣ ಕೊರಿಯಾದ ಕಾದಂಬರಿಕಾರ್ತಿ ಹಾನ್ ಕಾಂಗ್ 2016ನೇ ಸಾಲಿನ ಪ್ರತಿಷ್ಠಿತ ಮ್ಯಾನ್ ಬುಕರ್ ಪ್ರಶಸ್ತಿಯನ್ನು ಪಡೆದವರು. ಕೊರಿಯಾದ ಪ್ರಸ್ತುತ ರಾಜಕೀಯ ಸಂಘರ್ಷ ಮತ್ತು ತಲ್ಲಣಗಳ ಹಿನ್ನೆಲೆಯಲ್ಲಿ ರೂಪಿತವಾಗಿರುವ ಅವರ ಚಿಂತನಾಕ್ರಮವು ಮಾನವತೆಯೆಡೆಗಿನ ತನ್ನ ಕಾಳಜಿಯಿಂದಾಗಿ ಕಾಲ ದೇಶಗಳ ಚೌಕಟ್ಟನ್ನು ಮುರಿಯುತ್ತದೆ. ಅವರ ಬದುಕು ಮತ್ತು ಬರಹಗಳನ್ನು ವಿಶ್ಲೇಷಿಸುವ ಲೇಖನ ಇದು

'ಮನುಷ್ಯ ಮೂಲಭೂತವಾಗಿ ಕ್ರೂರಿಯೇ?'– ಇದು ದಕ್ಷಿಣ ಕೊರಿಯಾದ ಹೊಸ ತಲೆಮಾರಿನ ಭರವಸೆಯ ಕಾದಂಬರಿಕಾರ್ತಿ ಹಾನ್ ಕಾಂಗ್‌ರ ಬದುಕು ಮತ್ತು ಬರವಣಿಗೆಯನ್ನು ರೂಪಿಸಿರುವ ಪ್ರಶ್ನೆ. 1980ರಲ್ಲಿ ದಕ್ಷಿಣ ಕೊರಿಯಾದ ಗ್ವಾಂಜು ಎಂಬ ಊರಲ್ಲಿ ವಿದ್ಯಾರ್ಥಿ ಬಂಡಾಯ ನಡೆದಾಗ ಹಾನ್ ಕಾಂಗ್ ಒಂಬತ್ತು ವರ್ಷದ ಬಾಲಕಿ. ಅಧಿಕಾರದ ವಿಕೃತಶಕ್ತಿಯು ಆ ಪ್ರತಿಭಟನೆಯನ್ನು ಹತ್ತಿಕ್ಕಿತು. ನಾಡಿನ ರಾಜಕೀಯ ಏರಿಳಿತದ ಹೊತ್ತಿನಲ್ಲಿ ತಾನು ಮತ್ತು ತನ್ನ ಕುಟುಂಬದವರು ನೇರವಾಗಿ ತೊಂದರೆಗೆ ಒಳಗಾಗದಿದ್ದರೂ, ಸುತ್ತಮುತ್ತ ನಡೆಯುತ್ತಿದ್ದ ಭೀಕರ ಕೃತ್ಯಗಳು ಮುಗ್ಧ ಹಾನ್ ಕಾಂಗ್‌ರ ಮನಸ್ಸಿನಲ್ಲಿ ಅಚ್ಚೊತ್ತಿರುವ ಕಥನವೇ ಅವರ ಇತ್ತೀಚಿನ ಕಾದಂಬರಿ 'ಹ್ಯೂಮನ್ ಆಕ್ಟ್ಸ್' (2016). ಶೀರ್ಷಿಕೆಯೇ ಸೂಚಿಸುವಂತೆ, ಕಾದಂಬರಿಯು ಮನುಷ್ಯ